**ಕರ್ನಾಟಕ ಸರ್ಕಾರ**

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**

ಆಯುಕ್ತರವರ ಕಛೇರಿ, ಗ್ರಾ.ಕು.ನೀ.&.ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,

ಬೆಂಗಳೂರು – 560 009. ☎ : 080-22240508 📠 : 22240509 ಈ-ಮೇಲ್: krwssd@gmail.com


ಸಂ. ಗ್ರಾಕುನೀನೈಇ/ಲೆಕ್ಕ/ಬಿಡುಗಡೆ/11/2020 (ಇ) ದಿನಾಂಕ: 12-10-2020

# ಅಧಿಕೃತ ಜ್ಞಾಪನ

ವಿಷಯ: **ಜಲ್ ಜೀವನ್ ಮಿಷನ್ (JJM) ಯೋಜನೆಯಡಿ** 2020-21ನೇ ಸಾಲಿಗೆ ರಾಜ್ಯ ವಲಯದ **Task Force ಘಟಕಗಳಡಿ** ಅನುದಾನ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ:- 1) ಸರ್ಕಾರದ ಆದೇಶ ಸಂ.ಗ್ರಾಕುಸೀನೈಇ/ಲೆಶಾ/ಬಿಡುಗಡೆ/2/2020 (ಇ-ಆಫೀಸ್), ಬೆಂಗಳೂರು, ದಿನಾಂಕ: 29.09.2020.

2) ಪತ್ರ ಸಂಖ್ಯೆ: RDW&SD/30/CE/TECH/2020/375 dt:30.06.2020

3) ಪತ್ರ ಸಂಖ್ಯೆ:ಗ್ರಾಕುನೀ&ನೈಇ/85/ಮುಇಂ/ತಾಂತ್ರಿಕ/2020/777 ದಿ:05.09.2020

ಮೇಲೆ ಓದಲಾದ ಉಲ್ಲೇಖಿತ (1) ರ ಆದೇಶದಲ್ಲಿ ಲೆಕ್ಕಶೀರ್ಷಿಕೆ:4215-01-102-2-01 ರಡಿ 2020-21ನೇ ಸಾಲಿನ **ಮೂರನೇ** ಕಂತಿನ ಅನುದಾನ ರೂ.26479.00 ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಈಗಾಗಲೇ ಬಿಡುಗಡೆಗೊಳಿಸಲಾಗಿರುತ್ತದೆ. ಉಲ್ಲೇಖ (1) ಮತ್ತು (2) ರಲ್ಲಿ ಕ್ರಮವಾಗಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ವಿಭಾಗಗಳಿಗೆ ತುರ್ತು ಕುಡಿಯುವ ನೀರಿನ ಕಾಮಗಾರಿಗಳಿಗೆ 2020-21ನೇ ಸಾಲಿನಲ್ಲಿ ಅನುಮೋದನೆ ನೀಡಲಾಗಿದೆ.

ಜಲ್ ಜೀವನ್ ಮಿಷನ್ ಕಾರ್ಯಕ್ರಮದ (JJM) ಕಾಮಗಾರಿಗಳ ಅನುಷ್ಠಾನಕ್ಕಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಳಿಂದ ಅನುದಾನ ಬಿಡುಗಡೆಗೆ ಕೋರಿಕೆ ಸ್ವೀಕೃತವಾಗಿರುತ್ತದೆ. ಪ್ರಸ್ತುತ ಲಭ್ಯ ಅನುದಾನದಲ್ಲಿ ಗ್ರಾಮೀಣ ಕುಡಿಯುವ ನೀರು ಯೋಜನೆಯ Task Force ಘಟಕಗಳಡಿ ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಳಿಗೆ ಕುಡಿಯುವ ನೀರಿನ ಕಾಮಗಾರಿಗಳಿಗಾಗಿ **ಒಟ್ಟು ರೂ.1566.22 ಲಕ್ಷಗಳ** ಅನುದಾನವನ್ನು ಖಜಾನೆ-02 ರ ಮೂಲಕ ಬಿಡುಗಡೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

## ಆದೇಶ

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ 2020-21ನೇ ಸಾಲಿನಲ್ಲಿ ಜಲ್ ಜೀವನ್ ಮಿಷನ್ ಕಾರ್ಯಕ್ರಮದ (JJM)) ಕುಡಿಯುವ ನೀರಿನ ಯೋಜನೆಗಳಿಗಾಗಿ ರಾಜ್ಯ ವಲಯದ Task force ಘಟಕದ **ಸಾಮಾನ್ಯ** ಲೆಕ್ಕಶೀರ್ಷಿಕೆ 4215-01-102-2-01-132 ಅಡಿ **ರೂ.1566.22 ಲಕ್ಷಗಳನ್ನು ಅನುಬಂಧಂತೆ ಖಜಾನೆ-02** ರ ಮೂಲಕ ರಾಜ್ಯದ **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ ಬಿಡುಗಡೆ ಮಾಡಲು** ಆದೇಶಿಸಿದೆ.

2. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿನಿಯೋಗಿಸಲು ಆದೇಶಿಸಿದೆ.

**ಷರತ್ತುಗಳು:**

I. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ–1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು–2000, ಕರ್ನಾಟಕ ಆರ್ಥಿಕ ಸಂಹಿತೆ–1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ವಿನಿಯೋಗಿಸತಕ್ಕದ್ದು.

II. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಖಜಾನೆ–2ರ ತಂತ್ರಾಂಶದ ಮುಖಾಂತರ ಸಂಬಂಧಿಸಿದ ಕಛೇರಿಗಳ ವಿಷಯ ನಿರ್ವಾಹಕರು ಬಿಲ್ಲುಗಳನ್ನು ತಯಾರಿಸಬೇಕು.

III. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಖಜಾನೆ–2ರ ತಂತ್ರಾಂಶದ ಮುಖಾಂತರ ಸಂಬಂಧಿಸಿದ ಕಛೇರಿಗಳ ವಿಷಯ ನಿರ್ವಾಹಕರು ತಯಾರಿಸಲಾದ ಬಿಲ್ಲುಗಳೊಂದಿಗೆ ಆಯಾಯ ಕಛೇರಿಯ ನಿಯೋಜಿತ ಪರೀಕ್ಷಕರು ಪರೀಕ್ಷಿಸಿ, ಬಟವಾಡೆ ಅಧಿಕಾರಿಗಳಿಗೆ ಅನುಮೋದನೆಗಾಗಿ ಕಳುಹಿಸಿಕೊಡತಕ್ಕದ್ದು.

IV. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಸಂಬಂಧಿಸಿದ ಬಟವಾಡೆ ಅಧಿಕಾರಿಗಳ ಅನುಮೋದನೆಯ ನಂತರ ಅಂತಿಮ ಬಿಲ್ಲನ್ನು ತಯಾರಿಸಿ, ಸಹಿಯೊಂದಿಗೆ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ/ ಮುಖ್ಯ ಲೆಕ್ಕಾಧಿಕಾರಿಗಳ ಮೇಲು ರುಜುವಿಗೆ ಕಳುಹಿಸಿಕೊಡತಕ್ಕದ್ದು.

V. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಖಜಾನೆ–2ರ ಮುಖಾಂತರ ಸಂಬಂಧಿಸಿದ ಅಧಿಕಾರಿ / ಸಿಬ್ಬಂದಿ /ಗುತ್ತಿಗೆದಾರರ/ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲು ಕ್ರಮವಹಿಸತಕ್ಕದ್ದು.

VI. ಸಂಬಂಧಿಸಿದ ಬಟವಾಡೆ ಅಧಿಕಾರಿಯವರು ಖಜಾನೆ–2ರ ಮುಖಾಂತರ ತಯಾರಿಸಲಾದ ಖಜಾನೆಯ 62(ಬಿ) ತ:ಖ್ತೆಯೊಂದಿಗೆ ಲೆಕ್ಕ ಮರುಹೊಂದಾಣಿಕೆ ಮಾಡಿಕೊಳ್ಳುವುದು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಆಯಾ ಲೆಕ್ಕ ಶೀರ್ಷಿಕೆಗಳಡಿಯಲ್ಲಿಯೇ ವೆಚ್ಚ ಭರಿಸತಕ್ಕದ್ದು.

4. ಸಂಬಂಧಪಟ್ಟ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ ಬಿಲ್ಲುಗಳನ್ನು ಕಳುಹಿಸುವ ಮೊದಲು ಇಲಾಖಾ ಪಂಚತಂತ್ರದ ತಂತ್ರಾಂಶದಲ್ಲಿ (ಗಾಂಧಿ ಸಾಕ್ಷಿ ಕಾಯಕಲ್ಪ) ವಿವರಗಳನ್ನು ದಾಖಲಿಸಬೇಕು. ತದನಂತರ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕದಲ್ಲಿ ದಾಖಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು ಖಜಾನೆಯಲ್ಲಿ ಪಾವತಿಗೆ ಮಾನ್ಯ ಮಾಡಲು ಕ್ರಮವಹಿಸತಕ್ಕದ್ದು. ಹಾಗೂ IMIS ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಪರಿವೀಕ್ಷಿಸಿ ದೃಢೀಕರಿಸಬೇಕು.

5. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಮುಂದುವರಿದಿರುವ / ಪೂರ್ಣಗೊಂಡಿರುವ / ಪೂರ್ಣಗೊಳಿಸ ಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.

6. ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆದುರಾಗಿ ಸಂಬಂಧಪಟ್ಟ ಕಾಮಗಾರಿಗಳ ಅನುಷ್ಠಾನದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಪ್ರತಿ ಮಾಹೆ 10ನೇ ದಿನಾಂಕದೊಳಗೆ ಇಂದೀಕರಿಸತಕ್ಕದ್ದು. ಹಾಗೂ ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ ಇವರು ಸಂಬಂಧಿಸಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು IMIS ನಲ್ಲಿ ಇಂದೀಕರೀಸಿದ ಮಾಹಿತಿಯನ್ನು ಪರಿಶೀಲಿಸತಕ್ಕದ್ದು.

7. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು.

8. ಸಂಬಂದಪಟ್ಟ ವಿಭಾಗಗಳು, ಖಜಾನೆ ಮೂಲಕ ಭರಿಸಲಾದ ವೆಚ್ಚದೊಂದಿಗೆ ಹೊಂದಾಣಿಕೆ ಮಾಡಿಕೊಂಡು, JJM ಘಟಕವಾರು (MVS, C&Q, TF, WPP, MVS (O&M) others...) ಅನುದಾನ/ವೆಚ್ಚದ ವಿವರಗಳನ್ನು ಪ್ರತಿ ಮಾಹೆ 03ನೇ ದಿನಾಂಕದೊಳಗೆ ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆಗೆ

ವರದಿಮಾಡತಕ್ಕದ್ದು. ಹಾಗೂ DSS ತಂತ್ರಾಂಶದಲ್ಲಿ ಪ್ರಗತಿ ಇಂದೀಕರಿಸತಕ್ಕದ್ದು. ಹಾಗೂ ಅನುದಾನವನ್ನು ಬಿಡುಗಡೆಯಾದ 10 ದಿನಗಳೊಳಗಾಗಿ ವೆಚ್ಚಭರಿಸಲು ಕ್ರಮವಹಿಸುವುದು. ಇಲ್ಲಾವಾದಲ್ಲಿ ಯಾವುದೇ ಸೂಚನೆ ನೀಡದೆ ಅನುದಾನ ಹಿಂಪಡೆದು, ಮರುಹೊಂದಾಣಿಕೆ ಮಾಡಲಾಗುವುದು.

9. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

(ಕಛೇರಿ ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಮುಖ್ಯ ಲೆಕ್ಕಾಧಿಕಾರಿಗಳು
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2), ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಖಜಾನೆ ಇಲಾಖೆ, ಬೆಂಗಳೂರು.
15. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖಜಾನೆ ಇಲಾಖೆ, ಬೆಂಗಳೂರು.
16. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
17. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು.
18. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
19. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು.
20. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
21. ಸಂಬಂಧಪಟ್ಟ ವಿಭಾಗ ಕಛೇರಿಗಳ ಕಾರ್ಯಪಾಲಕ ಅಭಿಯಂತರರು, (ವಿಭಾಗ ಕಛೇರಿಗಳ ಮುಖಾಂತರ ರಾಜ್ಯದ ಉಪ ವಿಭಾಗ ಕಛೇರಿಗಳಿಗೆ)
22. ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
23. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
24. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
25. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
26. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
27. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
28. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂದ-02

ಅಧಿಕೃತ ಜ್ಞಾಪನ ಸಂಖ್ಯೆ:ಗ್ರಾಕುನೀನೈಇ/ಲೆಕ್ಕ/ಬಿಡುಗಡೆ/11/2020 (ಇ), ಬೆಂಗಳೂರು, ದಿನಾಂಕ: 12-10-2020ರ ಲಗತ್ತು.

ಲೆಕ್ಕ ಶೀರ್ಷಿಕೆ 4215-01-102-2-01 ತುರ್ತು ಕುಡಿಯುವ ನೀರು ಘಟಕದಡಿ ಖಜಾನೆ-02 ರಲ್ಲಿ ಬಿಡುಗಡೆಮಾಡಲಾದ ಕೇಂದ್ರ ಮತ್ತು ರಾಜ್ಯದ ಪಾಲಿನ ಅನುದಾನ

(ರೂ ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ / ವಿಭಾಗ | TF (1,2&3) | ZP Precident TF | TF (20-21) | ಒಟ್ಟಾರೆ |
|---|---|---|---|---|---|
| | | ಸಾಮಾನ್ಯ | ಸಾಮಾನ್ಯ | ಸಾಮಾನ್ಯ | ಸಾಮಾನ್ಯ |
| 1 | ಬಾಗಲಕೋಟೆ | 51.90 | 100.00 | 0.00 | **151.90** |
| 2 | ಬೆಳಗಾವಿ | 5.52 | 25.00 | 0.00 | **30.52** |
| 3 | ಚಿಕ್ಕೋಡಿ | 7.26 | 3.73 | 0.00 | **10.99** |
| 4 | ಹರಪನಹಳ್ಳಿ | 0.00 | 21.00 | 0.00 | **21.00** |
| 5 | ಬೀದರ್ | 0.00 | 100.00 | 0.00 | **100.00** |
| 6 | ಬಿಜಾಪುರ | 0.00 | 10.23 | 0.00 | **10.23** |
| 7 | ಚಾಮರಾಜನಗರ | 0.00 | 100.00 | 0.00 | **100.00** |
| 8 | ಚಿಕ್ಕಬಳ್ಳಾಪುರ | 0.00 | 0.00 | 203.50 | **203.50** |
| 9 | ಚಿಕ್ಕಮಗಳೂರು | 0.00 | 0.00 | 0.00 | **0.00** |
| 10 | ಚಿತ್ರದುರ್ಗ | 0.00 | 32.98 | 0.00 | **32.98** |
| 11 | ದಕ್ಷಿಣ ಕನ್ನಡ | 0.00 | 47.54 | 0.00 | **47.54** |
| 12 | ದಾವಣಗೆರೆ | 14.89 | 100.00 | 0.00 | **114.89** |
| 13 | ಗದಗ | 0.00 | 100.00 | 0.00 | **100.00** |
| 14 | ಕಲಬುರಗಿ | 28.21 | 0.00 | 0.00 | **28.21** |
| 15 | ಹಾಸನ | 0.65 | 0.00 | 0.00 | **0.65** |
| 16 | ಕೊಡಗು | 0.00 | 0.00 | 0.00 | **0.00** |
| 17 | ಕೋಲಾರ | 0.00 | 40.00 | 100.00 | **140.00** |
| 18 | ಕೊಪ್ಪಳ | 0.00 | 0.00 | 0.00 | **0.00** |
| 19 | ಮಂಡ್ಯ | 66.13 | 54.82 | 0.00 | **120.95** |
| 20 | ಮೈಸೂರು | 0.00 | 100.00 | 0.00 | **100.00** |
| 21 | ರಾಯಚೂರು | 32.00 | 0.00 | 0.00 | **32.00** |
| 22 | ರಾಮನಗರ | 0.00 | 0.00 | 0.00 | **0.00** |
| 23 | ಶಿವಮೊಗ್ಗ | 1.36 | 35.87 | 0.00 | **37.23** |
| 24 | ತುಮಕೂರು | 0.00 | 51.20 | 0.00 | **51.20** |
| 25 | ಉಡುಪಿ | 0.00 | 30.00 | 0.00 | **30.00** |
| 26 | ಉತ್ತರ ಕನ್ನಡ | 18.75 | 29.17 | 0.00 | **47.92** |
| 27 | ಯಾದಗಿರಿ | 0.00 | 54.51 | 0.00 | **54.51** |
| | ಒಟ್ಟಾರೆ | **226.67** | **1036.05** | **303.50** | **1566.22** |

for ಆಯುಕ್ತರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.